16 ಶ್ರೀ ಬಾಲಕೃಷ್ಣ ಹೆಚ್.ಸಿ.(ಮಾಗಡಿ)

ಪ್ರೊ.ಡಾ:ಮುಮ್ತಾಜ್ ಆಲಿ ಖಾನ್‌ಹಜ್(ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ 2008ರ ಬಜೆಟ್‌ನಲ್ಲಿ ರಾಜ್ಯದ ಯಾವ ಸ್ಥಳಗಳಲ್ಲಿ ಎಷ್ಟು ಶಾದಿಮಹಲ್‌ಗಳನ್ನು ನಿರ್ಮಿಸಲಾಗುವುದೆಂದು ತಿಳಿಸಲಾಗಿತ್ತು. ಇಂತಹ ಗುರಿ ಸರ್ಕಾರದ ಮುಂದೆ ಇರುವುದಿಲ್ಲ.

ಆ 2008ರ ಬಜೆಟ್ ನಲ್ಲಿ ಶಾದಿಮಹಲ್‌ಗಳ ಸ್ಥಾಪನೆಗಾಗಿ ಮೀಸಲಿಟ್ಟ ಹಣವೆಷ್ಟು ಹಾಗೂ ಈವರೆಗೆ ಬಿಡುಗಡೆ ಮಾಡಲಾದ ಹಣವೆಷ್ಟು ಮತ್ತು ಪ್ರಾರಂಭಿಸಲಾಗಿರುವ ಸ್ಥಳಗಳಾವುವು (ವಿವರ ನೀಡುವುದು)

2008–09ರ ಆಯವ್ಯಯದಲ್ಲಿ ರೂ.1500.00 ಲಕ್ಷಗಳನ್ನು ಒದಗಿಸಿದ್ದು, ಈವರೆಗೆ ರೂ.641.00 ಲಕ್ಷವನ್ನು ಬಿಡುಗಡೆ ಮಾಡಲಾಗಿದ್ದು, ಇನ್ನುಳಿದ ಹಣವನ್ನು ಪ್ರಸ್ತುತ ಆರ್ಥಿಕ ವರ್ಷ ಮುಗಿಯುವುದರೊಳಗೆ ಬಿಡುಗಡೆ ಮಾಡಲು ಕ್ರಮಕೈಗೊಳ್ಳಲಾಗುವುದು. ಪ್ರಾರಂಭಿಸಲಾಗಿರುವ ಸ್ಥಳಗಳ ವಿವರ ಅನುಬಂಧದಲ್ಲಿ ನೀಡಲಾಗಿದೆ.

ಇ ಮಾಗಡಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಶಾದಿಮಹಲ್ ಸ್ಥಾಪನೆಗೆ ಯಾವಾಗ ಚಾಲನೆ ನೀಡಲಾಗುವುದು?

ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.

18 ಶ್ರೀ ಬಾಲಕೃಷ್ಣ ಹೆಚ್.ಸಿ.(ಮಾಗಡಿ)

ವೈದ್ಯಕೀಯ ಶಿಕ್ಷಣ ಸಚಿವರು

ಅ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯವನ್ನು ಯಾವ ಸರ್ಕಾರವಿದ್ದಾಗ ಹಾಗೂ ಯಾವಾಗ ರಾಮನಗರದಲ್ಲಿ ಸ್ಥಾಪಿಸಲು ತೀರ್ಮಾನ ತೆಗೆದುಕೊಳ್ಳಲಾಯಿತು;

ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯವನ್ನು ರಾಮನಗರಕ್ಕೆ ಸ್ಥಳಾಂತರಿಸುವ ತೀರ್ಮಾನವನ್ನು ಮಾನ್ಯ ಶ್ರೀ ಹೆಚ್.ಡಿ.ಕುಮಾರಸ್ವಾಮಿ ಯವರು ಮುಖ್ಯಮಂತ್ರಿಗಳಾಗಿದ್ದ ಸರ್ಕಾರದಲ್ಲಿ ತೆಗೆದುಕೊಳ್ಳಲಾಗಿದೆ ಹಾಗೂ ದಿನಾಂಕ:10.08.2007ರ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲ್ಪಟ್ಟಿದೆ.

ಆ ಈ ವಿಶ್ವವಿದ್ಯಾಲಯ ಸ್ಥಾಪನೆಯ ವಿಭಾಗಗಳ ರೂಪುರೇಶೆ ಗಳೇನೆಂಬುದರ ಬಗ್ಗೆ ಪೂರ್ಣ ವಿವರ ನೀಡುವುದು;